<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>S.C.103/2017</u>

ದಿಃ 31.08.2023
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-19 Pw-17

| | | |
|---|---|---|
| ಹೆಸರು | ಃ | ಲಿಂಗದೇವರು ಎಂ ಸಿ |
| ತಂದೆಯ ಹೆಸರು | ಃ | ಲೇಟ್ ಚಂದ್ರಪ್ಪ |
| ವಯಸ್ಸು | ಃ | 52 ವರ್ಷ |
| ಉದ್ಯೋಗ | ಃ | ಎಎಸ್ಐ, ಕುದೂರು ಪೊಲೀಸ್ ಠಾಣೆ |
| ವಾಸಸ್ಥಳ | ಃ | ಕುದೂರು |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ಸನ್ 2016 ರ ಜೂನ್ ಮಾಹೆಯಿಂದ ಸನ್ 2020ರ ಅಗಸ್ಟ್ ಮಾಹೆಯವರೆಗೆ ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ನಾನು ಹೆಚ್ಸಿ ನಂ. 02 ಎಂದು ಕರ್ತವ್ಯ ನಿರ್ವಹಿಸುತ್ತಿದ್ದೆನು.

2. ದಿಃ 21.10.2016ರಂದು ಚಾಸಾ 34 ಇವರ ನಿರ್ದೇಶನದ ಮೇರೆಗೆ ನಾನು, ಚಾಸಾ 20, 33 ಮತ್ತು 1ನೇ ಆರೋಪಿತನಾದ ಮಂಜುನಾಥ್ ಒಂದು ಕಾರ್ ನಲ್ಲಿ ಮುರುಡೇಶ್ವರಕ್ಕೆ ಹೋಗಿ ಸೀ ವೀವ್ ಲಾಡ್ಜ್ ನಂ. 115 ಮತ್ತು 116ರಲ್ಲಿ ತಾವು ತಂಗಿದ್ದಾಗಿ ಹೇಳಿ, ತೋರಿಸಿದ್ದರ ಮೇರೆಗೆ ಅದಕ್ಕೆ ಸಂಬಂಧಿಸಿದಂತೆ ರೀಸಪ್ಷನ್ ಹತ್ತಿರ ಬಂದು,ಲೇಡ್ಜರ್ ಎಕ್ಸ್ ಟ್ರ್ಯಾಕ್ಟ್ ನ್ನು ಮಧ್ಯಾಹ್ನ 2 ರಿಂದ 3 ಗಂಟೆಯವರೆಗೆ ಒಂದು ಮಹಜರ್‌ನ್ನು ಮಾಡಿ ವಶಕ್ಕೆ

ಪಡೆದಿದ್ದು, ಸದರಿ ಮಹಜರ್ ನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ಅದನ್ನು ನಿಪಿ 20 ಎಂದು ಮತ್ತು ಅದರ ಮೇಲೆ ಇರುವ ನನ್ನ ಸಹಿಯನ್ನು ನಿಪಿ 20 ಎ ಎಂದು ಗುರುತಿಸಲಾಯಿತು.

3. ಸದರಿ ನಿಪಿ 20 ರ ಅಡಿಯಲ್ಲಿ ಅಮಾನತ್ತು ಪಡಿಸಿಕೊಂಡಿದ್ದ ಲೇಡ್ಜರ್ ಎಕ್ಸ್ ಟ್ರ್ಯಾಕ್ಟ್ ಮತ್ತು ಕ್ಯಾಸ್ ಮೆಮೋ ಪ್ರತಿಗಳನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ಅವುಗಳನ್ನು ಕ್ರಮವಾಗಿ ನಿಪಿ 21 ಮತ್ತು 22 ಎಂದು ಗುರುತಿಸಲಾಯಿತು.

4. ಅದೇ ದಿನ ಮಧ್ಯಾಹ್ನ 3.30 ರಿಂದ 4.15 ರವರೆಗೆ ಸದರಿ 1 ನೇ ಆರೋಪಿತನು ತಾನು ಬಟ್ಟೆ ಖರೀದಿ ಮಾಡಿದ್ದ ರೋಡ್ ನ ಬಳಿ ಇದ್ದ ಜಾಗವನ್ನು ತೋರಿಸಿದ್ದು, ಅಲ್ಲಿಯೂ ಸಹ ಒಂದು ಸ್ಥಳ ಪಂಚನಾಮೆಯನ್ನು ಚಾಸಾ 16 ರಿಂದ 18 ಇವರ ಸಮಕ್ಷಮದಲ್ಲಿ ಮಾಡಿದ್ದು, ಅದರ ಮೇಲೆ ಅವರ ಸಹಿಗಳನ್ನು ಪಡೆದಿರುತ್ತಾರೆ.

5. ಸ್ಥಳ ಪಂಚನಾಮೆಯನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ನಿಪಿ 23 ಎಂದು ಮತ್ತು ಅದರ ಮೇಲೆ ಇರುವ ನನ್ನ ಸಹಿಯನ್ನು ನಿಪಿ 23 ಎ ಎಂದು ಗುರುತಿಸಲಾಯಿತು.

6. ನಂತರ ಅದೇ ದಿನ ಹೊನ್ನಾವರದಲ್ಲಿನ ಹೋಟೆಲ್ ಕಾಮತ್ ಮುಂಭಾಗದಲ್ಲಿ ರಸ್ತೆಯ ಬಳಿ ಇದ್ದ ಖಾಲಿ ಜಾಗದಲ್ಲಿ 1 ನೇ

ಆರೋಪಿತನು ಕೊಲೆ ಮಾಡುವ ಸಮಯದಲ್ಲಿ ತಾನು ತೊಟ್ಟಿದ್ದ ರಕ್ತಖಚಿತವಾದ ಬಟ್ಟೆಗಳನ್ನು ಎಸೆದಿರುವ ಜಾಗವೆಂದು ತೋರಿಸಿದ್ದರ ಮೇರೆಗೆ ಒಂದು ಪಂಚನಾಮೆಯನ್ನು ಮಾಡಿ ಅದರ ಅಡಿಯಲ್ಲಿ ಒಟ್ಟು ರಕ್ತದ ಕಲೆಯುಳ್ಳ 5 ಬಟ್ಟೆಗಳನ್ನು ಅಮಾನತ್ತುಪಡಿಸಿಕೊಂಡು ಅದರ ಮೇಲೆ ಚಾಸಾ 16 ರಿಂದ 18 ಇವರ ಸಹಿಗಳನ್ನು ಪಡೆದಿರುತ್ತಾರೆ.

7. ಸದರಿ ಪಂಚನಾಮೆಯನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ನಿಪಿ 24 ಎಂದು ಮತ್ತು ಅದರ ಮೇಲೆ ಇರುವ ನನ್ನ ಸಹಿಯನ್ನು ನಿಪಿ 24 ಎ ಎಂದು ಗುರುತಿಸಲಾಯಿತು.

8. ಈಗ ಸೀಲ್ ಮಾಡಿದ್ದ ಚೀಲುಗಳಿಂದ ಒಂದು ಕಪ್ಪು ಬಣ್ಣದ ಟೀ ಶರ್ಟ್, ಎರಡು ಆಕಾಶ್ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್, ಒಂದು ತುಂಬುತೋಳಿದ ಕೆಂಪು ಬಣ್ಣದ ಟೀ ಶರ್ಟ್, ಒಂದು ಗುಲಾಬಿ ಬಣ್ಣದ ತುಂಬುತೋಳಿನ ಟೀ ಶರ್ಟ್ ಎಲ್ಲವೂ ರಕ್ತಖಚಿತವಾಗಿದ್ದು, ಅವುಗಳನ್ನು ಈಗ ಮುಕ್ತ ನ್ಯಾಯಾಲಯದಲ್ಲಿ ತೆಗೆದು ತೋರಿಸುತ್ತಿರುವುದರಿಂದ ಅವುಗಳನ್ನು ಕ್ರಮವಾಗಿ ಈಗ ಮು.ಮಾ. 9 ರಿಂದ 13 ಎಂದು ಗುರುತಿಸಲಾಯಿತು.

9. ಈಗ ನ್ಯಾಯಾಲಯದಲ್ಲಿ 1 ನೇ ಆರೋಪಿತನಾದ ಮಂಜುನಾಥ ಈತನು ಇದ್ದು, ಆತನನ್ನು ಗುರುತಿಸುತ್ತಿದ್ದೇನೆ.

<u>ಪಾಟೀ ಸವಾಲುಃ ಶ್ರೀ.ಆರ್‌ಕೆಎಸ್., ವಕೀಲರಿಂದ ಆರೋಪಿಗಳ ಪರವಾಗಿಃ</u>

10. ಆ ದಿನ ಬೆಳಿಗ್ಗಿನ ಜಾವ 5 ಗಂಟೆಯ ಸಮಯದಲ್ಲಿ ಚಾಸಾ 34 ಇವರು ಮುರುಡೇಶ್ವರಕ್ಕೆ ಹೋಗಲು ಮೌಖಿಕವಾಗಿ ಆದೇಶಿಸಿರುತ್ತಾರೆ.

11.ಆ ಪ್ರಕಾರ ಬೆಳಿಗ್ಗಿನ ಜಾವ 5 ಗಂಟೆಗೆ ಮುರುಡೇಶ್ವರಕ್ಕೆಂದು ಹೊರಟಿರುತ್ತೇವೆ.

12.ನಾನು ಮುರುಡೇಶ್ವರಕ್ಕೆ ಹೋದ ವಾಹನ ಬಾಡಿಗೆ ಇನೋವಾ ಕಾರ್ ಆಗಿರುತ್ತದೆ

13. ಮಾಗಡಿಯಿಂದ ಕುಣಿಗಲ್, ತಿಪ್ಪಟೂರು ಮಾರ್ಗವಾಗಿ ಮುರುಡೇಶ್ವರಕ್ಕೆ ಹೋಗಿರುತ್ತೇವೆ.

14. ಮಾಗಡಿಯಿಂದ ಮುರುಡೇಶ್ವರ 450 ಕಿ.ಮೀ. ಅಂತರದಲ್ಲಿ ಇರುತ್ತದೆ ಎಂಬುವುದು ಸರಿ.

15. ಕಾರ್ ನಲ್ಲಿ ಸಾಮಾನ್ಯವಾಗಿ 9 ರಿಂದ 10 ಗಂಟೆಯ ಕಾಲ ಬೇಕಾಗುತ್ತದೆ ಎಂಬುವುದು ಸರಿಯಲ್ಲ.

16.ಕೇವಲ 7 ಗಂಟೆಗಳು ಮಾತ್ರ ಬೇಕಾಗುತ್ತದೆ.

17. ತಿಂಡಿಗೆ ಮತ್ತು ಊಟಕ್ಕೆ ರಸ್ತೆಯ ಮಧ್ಯದಲ್ಲಿ ನಮ್ಮ ಸದರಿ ವಾಹನ ನಿಲ್ಲಿಸಿದ್ದೆವು.

18. ತಿಂಡಿ ಮಾಡಲು ಸುಮಾರು ಅರ್ಧ ಗಂಟೆಯ ಕಾಲ ನಿಲ್ಲಿಸಿದ್ದೆವು.

19.ಅಲ್ಲಿಂದ ನೇರವಾಗಿ ನಾವು ಮುರುಡೇಶ್ವರಕ್ಕೆ ಹೋಗಿರುತ್ತೇವೆ.

20. ಮುರುಡೇಶ್ವರಕ್ಕೆ ತಲುಪಿದಾಗ ಮಧ್ಯಾಹ್ನ ಸುಮಾರು 1.00 ಗಂಟೆಯ ಸಮಯವಾಗಿತ್ತು.

21. ಸೀ ವೀವ್ ರೆಸಾರ್ಟ್ ಗೆ ಹೋದಾಗ ಅಲ್ಲಿ ಮ್ಯಾನೇಜರ್ ಮತ್ತು ಇನ್ನೊಬ್ಬ ರೂಂ. ಬಾಯ್ ಇದ್ದರು.

22.ಸಾಮಾನ್ಯವಾಗಿ ಎಲ್ಲಾ ಲಾಡ್ಜ್ ಮತ್ತು ರೇಸಾರ್ಟ್ ಗಳಲ್ಲಿ ಸಿಸಿಟಿವಿ ಅಳವಡಿಸಿರುತ್ತಾರೆ ಎಂದರೆ ಇರಬಹುದು ಎಂದು ಹೇಳುತ್ತೇನೆ.

23. ಸದರಿ ರೇಸಾರ್ಟ್ ನಲ್ಲಿ ಸಿಸಿಟಿವಿ ಫ್ಯೂಟೇಜ್ ನ್ನು ನೋಡಿರುವುದಿಲ್ಲ.

24. ನಿಪಿ 22ರಲ್ಲಿ ಎರಡು ಕಡೆ ತಿದ್ದುಪಡಿ ಮಾಡಿದ್ದು ಇರುತ್ತವೆ ಎಂಬುವುದು ಸರಿ.

25. ನಿಪಿ 22ರಲ್ಲಿ ಸಿಎಸ್‌ಟಿ ಮತ್ತು ಜಿಎಸ್‌ಟಿ ನಂಬರ್ ಇರುವುದಿಲ್ಲ ಎಂಬುವುದು ಸರಿ.

26. ನಿಪಿ 22ರಲ್ಲಿ ನರಸಿಂಹಮೂರ್ತಿ ಈತನ ತಂದೆಯ ಹೆಸರು ಬರೆದಿರುವುದಿಲ್ಲ ಎಂಬುವುದು ಸರಿ.

27. ನಿಪಿ 21 ರಲ್ಲಿ ಊರಿನ ಹೆಸರು ಮಾಗಡಿ ಎಂದು ಬರೆದಿದ್ದು, ನಿಪಿ 22 ರಲ್ಲಿ ಬೆಂಗಳೂರು ಎಂದು ಬರೆದಿದ್ದು ಇರುತ್ತದೆ ಎಂಬುವುದು ಸರಿ.

28. ಸದರಿ ಸೀ ವೀವ್ ರೇಸಾರ್ಟ ನ ಚೆಕ್ ಬಂದಿಯು ಪೂರ್ವಕ್ಕೆ ಖಾಲಿ ಜಾಗ, ಪಶ್ಚಿಮಕ್ಕೆ ರೇಸಾರ್ಟ ನ ರೂಂ.ಗಳು ಉತ್ತರಕ್ಕೆ ಖಾಲಿ ಜಾಗ, ದಕ್ಷಿಣಕ್ಕೆ ರೇಸಾರ್ಟ್ ನ ಪಾರ್ಕ್ ಇರುತ್ತವೆ.

29. ನಿಪಿ 20 ರಲ್ಲಿ ನಿಪಿ 22 ರ ಬಿಲ್ ನಂಬರ್ ನ್ನು ಕಾಣಿಸಿರುವುದಿಲ್ಲ ಎಂಬುವುದು ಸರಿ.

30. ಮು.ಮಾ. 9 ರಿಂದ 13 ಗಳ ಮೇಲೆ ನನ್ನ ಸಹಿಯುಳ್ಳ ಚೀಟುಗಳು ಇರುವುದಿಲ್ಲ ಎಂಬುವುದು ಸರಿ.

31. ಮು.ಮಾ. 9 ಹರಿದಿರುವ ಟೀ ಶರ್ಟ್ ಆಗಿರುತ್ತದೆ ಎಂಬುವುದು ಸರಿ.

32. ಮು.ಮಾ. 9 ರಿಂದ 13 ಗಳು ಆರೋಪಿತರಿಗೆ ಸಂಬಂಧಿಸಿರುವುದಿಲ್ಲ ಎಂದರೆ 1 ನೇ ಆರೋಪಿತರಿಗೆ ಸಂಬಂಧಿಸಿದ್ದು ಎಂದು ಹೇಳುತ್ತೇನೆ.

33. ಮು.ಮಾ. 9 ಹಳೆಯ ನಿರುಪಯುಕ್ತವಾದ ಬಟ್ಟೆಯಾಗಿರುತ್ತದೆ ಎಂಬುವುದು ಸರಿಯಲ್ಲ.

34. ಸದರಿ ನಿಪಿ 20, 23 ಮತ್ತು 24ಗಳನ್ನು ಚಾಸಾ 33 ಇವರು ಬರೆದಿರುತ್ತಾರೆ.

35. ದಿಃ 21.10.2016ರಂದು ಚಾಸಾ 34 ಇವರ ನಿರ್ದೇಶನದ ಮೇರೆಗೆ ನಾನು, ಚಾಸಾ 20, 33 ಮತ್ತು 1ನೇ ಆರೋಪಿತನಾದ ಮಂಜುನಾಥ್ ಒಂದು ಕಾರ್ ನಲ್ಲಿ ಮುರುಡೇಶ್ವರಕ್ಕೆ ಹೋಗಿ ಸೀ ವೀವ್ ಲಾಡ್ಜ್ ನಂ. 115 ಮತ್ತು 116ರಲ್ಲಿ ತಾವು ತಂಗಿದ್ದಾಗಿ ಹೇಳಿ, ತೋರಿಸಿದ್ದರ ಮೇರೆಗೆ ಅದಕ್ಕೆ ಸಂಬಂಧಿಸಿದಂತೆ ರೀಸಪ್ಸನ್ ಹತ್ತಿರ ಬಂದು,ಲೇಡ್ಜರ್ ಎಕ್ಸ್ ಟ್ರ್ಯಾಕ್ಟ್ ನ್ನು ಮಧ್ಯಾಹ್ನ 2 ರಿಂದ 3 ಗಂಟೆಯವರೆಗೆ ಒಂದು ಮಹಜರ್‌ನ್ನು ಮಾಡಿ ವಶಕ್ಕೆ ಪಡೆದಿದ್ದು, ಸದರಿ ಮಹಜರ್ ನ್ನು ಈಗ ನೋಡಿ ಗುರುತಿಸುತ್ತಿದ್ದೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

36. ಸದರಿ ನಿಪಿ 20ರ ಅಡಿಯಲ್ಲಿ ಅಮಾನತ್ತು ಪಡಿಸಿಕೊಂಡಿದ್ದ ಲೇಡ್ಜರ್ ಎಕ್ಸ್ ಟ್ರ್ಯಾಕ್ಟ್ ಮತ್ತು ಕ್ಯಾಸ್ ಮೆಮೋ ಪ್ರತಿಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ,ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

37. ಅದೇ ದಿನ ಮಧ್ಯಾಹ್ನ 3.30ರಿಂದ 4.15ರವರೆಗೆ ಸದರಿ 1ನೇ ಆರೋಪಿತನು ತಾನು ಬಟ್ಟೆ ಖರೀದಿ ಮಾಡಿದ್ದ ರೋಡ್ ನ ಬಳಿ ಇದ್ದ ಜಾಗವನ್ನು ತೋರಿಸಿದ್ದು, ಅಲ್ಲಿಯೂ ಸಹ ಒಂದು ಸ್ಥಳ

ಪಂಚನಾಮೆಯನ್ನು ಚಾಸಾ 16 ರಿಂದ 18 ಇವರ ಸಮಕ್ಷಮದಲ್ಲಿ ಮಾಡಿದ್ದು, ಅದರ ಮೇಲೆ ಅವರ ಸಹಿಗಳನ್ನು ಪಡೆದಿರುತ್ತಾರೆ,ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

38. ನಂತರ ಅದೇ ದಿನ ಹೊನ್ನಾವರದಲ್ಲಿನ ಹೋಟೆಲ್ ಕಾಮತ್ ಮುಂಭಾಗದಲ್ಲಿ ರಸ್ತೆಯ ಬಳಿ ಇದ್ದ ಖಾಲಿ ಜಾಗದಲ್ಲಿ 1 ನೇ ಆರೋಪಿತನು ಕೊಲೆ ಮಾಡುವ ಸಮಯದಲ್ಲಿ ತಾನು ತೊಟ್ಟಿದ್ದ ರಕ್ತಖಚಿತವಾದ ಬಟ್ಟೆಗಳನ್ನು ಎಸೆದಿರುವ ಜಾಗವೆಂದು ತೋರಿಸಿದ್ದರ ಮೇರೆಗೆ ಒಂದು ಪಂಚನಾಮೆಯನ್ನು ಮಾಡಿ ಅದರ ಅಡಿಯಲ್ಲಿ ಒಟ್ಟು ರಕ್ತದ ಕಲೆಯುಳ್ಳ 5 ಬಟ್ಟೆಗಳನ್ನು ಅಮಾನತ್ತುಪಡಿಸಿಕೊಂಡು ಅದರ ಮೇಲೆ ಚಾಸಾ 16 ರಿಂದ 18 ಇವರ ಸಹಿಗಳನ್ನು ಪಡೆದಿರುತ್ತಾರೆ,ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

39. ಈಗ ಸೀಲ್ ಮಾಡಿದ್ದ ಚೀಲುಗಳಿಂದ ಒಂದು ಕಪ್ಪು ಬಣ್ಣದ ಟೀ ಶರ್ಟ್, ಎರಡು ಆಕಾಶ್ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್, ಒಂದು ತುಂಬುತೋಳಿದ ಕೆಂಪು ಬಣ್ಣದ ಟೀ ಶರ್ಟ್, ಒಂದು ಗುಲಾಬಿ ಬಣ್ಣದ ತುಂಬುತೋಳಿನ ಟೀ ಶರ್ಟ್ ಎಲ್ಲವೂ ರಕ್ತಖಚಿತವಾಗಿದ್ದು, ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

40. ಈಗ ನ್ಯಾಯಾಲಯದಲ್ಲಿ 1ನೇ ಆರೋಪಿತನಾದ ಮಂಜುನಾಥ ಈತನು ಇದ್ದು, ಆತನನ್ನು ಗುರುತಿಸುತ್ತಿದ್ದೇನೆ,ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

41. ನಿಪಿ 21 ಮತ್ತು 22ಗಳು ಆರೋಪಿತರಿಗೆ ಸಂಬಂಧಿಸದೇ ಇದ್ದರೂ ಸಹ ಅವುಗಳನ್ನು ಠಾಣೆಯಲ್ಲಿ ಪ್ರಕರಣಕ್ಕೆ ಅನೂಕೂಲವಾಗುವ ರೀತಿಯಲ್ಲಿ ಸೃಷ್ಟಿಸಿದ್ದು ಇರುತ್ತವೆ ಎಂಬುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.